# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಶ್ರೀ ಎಂ.ಸೋಮಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಚಳ್ಳಕೆರೆ ಚಿತ್ರದುರ್ಗ ಜಿಲ್ಲೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ ಹಿರಿಯೂರು, ಚಿತ್ರದುರ್ಗ ಜಿಲ್ಲೆ, ಇವರಿಗೆ ವಿಧಿಸಿರುವ ದಂಡನೆಯನ್ನು ಮಾರ್ಪಡಿಸುವ ಕುರಿತು.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 48 ವಿಸೇಬಿ 2010, ದಿನಾಂಕ: 11.03.2014

2) ಶ್ರೀ ಎಂ.ಸೋಮಣ್ಣ ಇವರ ಮನವಿ ದಿನಾಂಕ: 23.07.2015

3) ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ, ಇವರ ಪತ್ರ ಸಂಖ್ಯೆ: ಜಿಪಂ/ಆ-3/ಸಿಆರ್-08/2009-10. ದಿನಾಂಕ:26-11-2015.

*****

**ಪ್ರಸ್ತಾವನೆ:**

ಶ್ರೀ ಎಂ.ಸೋಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿಯವರು 2007-08ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಅನುಷ್ಠಾನಗೊಂಡ ಸಿದ್ದೇಶ್ವರನದುರ್ಗ ಗ್ರಾಮ ಪಂಚಾಯತಿ ವ್ಯಾಪ್ತಿಯ ಪಿಳ್ಳಹಳ್ಳಿ ಗ್ರಾಮದ ಬೊಮ್ಮದೇವರಕುಂಟೆ ಕೆರೆಯ ಹೂಳೆತ್ತುವ ಕಾಮಗಾರಿಯು ಭೌತಿಕವಾಗಿ ಆಗದೇ ಇದ್ದರೂ ಸಹ ಅಕುಶಲ ಕೂಲಿ ಹಣ ಪಾವತಿಸಲು ಮಂಜೂರಾತಿ ಆದೇಶ ನೀಡಿ ಸರ್ಕಾರದ ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆಂಬ ಬಗ್ಗೆ ಮತ್ತು ಸದರಿ ಕಾಮಗಾರಿಯನ್ನು ಆನ್ ಲೈನ್ ಮೂಲಕ ಎಂ.ಐ.ಎಸ್.ನಲ್ಲಿ ಗಣಕೀಕರಣಗೊಳಿಸಲು ಅನುಮತಿ ನೀಡಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957ರ ನಿಯಮ 12ರಡಿಯಲ್ಲಿ ಕೈಗೊಂಡು ಸದರಿಯವರಿಗೆ ಮೇಲೆ ಓದಲಾದ (1)ರ ದಿನಾಂಕ : 11.03.2014 ರ ಆದೇಶದಲ್ಲಿ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿರುತ್ತದೆ :-

> "ಸದರಿ ಅಧಿಕಾರಿಯ ವೇತನದಲ್ಲಿ 2 ಹಂತಗಳನ್ನು 2 ವರ್ಷಗಳ ಅವಧಿಗೆ ಸಂಚಿತ ಪರಿಣಾಮವಿಲ್ಲದಂತೆ (without cumulative effect) ಕೆಳಗಿಳಿಸುವ ಮತ್ತು ಸದರಿ ಅವಧಿಯಲ್ಲಿ ಅವರು ವೇತನ ಬಡ್ತಿಗಳಿಗೆ ಅರ್ಹರಿಲ್ಲವೆಂಬ ದಂಡನೆಯನ್ನು ವಿಧಿಸಿ ಆದೇಶಿಸಿದೆ".

ಶ್ರೀ ಎಂ.ಸೋಮಣ್ಣ ಇವರು ಮೇಲೆ ಓದಲಾದ (2)ರ ದಿನಾಂಕ : 23.7.2015 ರಂದು ವಿವರವಾದ ಮನವಿ ಮತ್ತು ತಮ್ಮ ಮನವಿಯಲ್ಲಿ ಅಂಶಗಳಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಸಲ್ಲಿಸಿ ತಾವು ಪ್ರಕರಣದಲ್ಲಿ ಯಾವುದೇ ಲೋಪ ಮಾಡದಿದ್ದರೂ ಸಹ ತಮಗೆ ಮೇಲೆ ತಿಳಿಸಿದಂತೆ ದಂಡನೆ ವಿಧಿಸಿರುವುದನ್ನು ಮಾರ್ಪಡಿಸಲು ಹಾಗೂ ದಂಡನೆಯನ್ನು ಕೈಬಿಡಲು ವಿನಂತಿಸಿದ್ದರ ಮೇರೆಗೆ ಸದರಿಯವರ ಮನವಿಯ ಬಗ್ಗೆ ಮೇಲೆ ಓದಲಾದ (3) ರಲ್ಲಿ ಚಿತ್ರದುರ್ಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರಿಂದ ವರದಿಯನ್ನು ಪಡೆಯಲಾಗಿರುತ್ತದೆ.

---2

ಶ್ರೀ ಎಂ. ಸೋಮಣ್ಣ, ಇವರ ವಿರುದ್ಧದ ಆರೋಪ ಮತ್ತು ಕಡತದಲ್ಲಿನ ಲಭ್ಯವಿರುವ ದಾಖಲೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಚಿತ್ರದುರ್ಗ ರವರ ವರದಿಯನ್ನು ಪರಿಶೀಲಿಸಲಾಗಿದೆ. ಶ್ರೀ ಎಂ.ಸೋಮಣ್ಣ, ಇವರ ವಿರುದ್ಧ ಈ ಕೆಳಕಂಡಂತೆ 2 ಆರೋಪಗಳನ್ನು ಮಾಡಲಾಗಿದೆ:-

> <u>1ನೇ ಆರೋಪ</u> :- 2007 – 08ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಚಳ್ಳಕೆರೆ ತಾಲ್ಲೂಕು, ಸಿದ್ಧೇಶ್ವರನದುರ್ಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಿಲ್ಲಹಳ್ಳಿ ಗ್ರಾಮದ ಬೊಮ್ಮದೇವರಕುಂಟೆ ಕೆರೆ ಹೂಳೆತ್ತುವ ಕಾಮಗಾರಿಗೆ ಸಂಬಂಧಿಸಿದಂತೆ ಭೌತಿಕವಾಗಿ ಕಾಮಗಾರಿಯು ನಿರ್ಮಾಣವಾಗದೇ ಇದ್ದರೂ ಸಹ ಸದರಿ ಕಾಮಗಾರಿಗೆ ಅಕುಶಲ ಕೂಲಿ ಹಣ ಪಾವತಿಸಿ ಹಣ ಬಿಡುಗಡೆ ಮಾಡಿರುವ ಬಗ್ಗೆ,
>
> <u>2ನೇ ಆರೋಪ</u> : ಕಾಮಗಾರಿಯ ವಿವರಣೆಯನ್ನು <u>ಆನ್‌ಲೈನ್ ಎಂ.ಐ.ಎಸ್.ನಲ್ಲಿ</u> ಗಣಕೀಕರಣಗೊಳಿಸಲು ಅನುಮತಿ ನೀಡಿ ಹಣ ದುರುಪಯೋಗವಾಗಲು ಕಾರಣರಾಗಿರುವ ಬಗ್ಗೆ ಆರೋಪಿಸಲಾಗಿರುತ್ತದೆ.

ಶ್ರೀ ಎಂ.ಸೋಮಣ್ಣ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 12 ರಡಿಯಲ್ಲಿ ಕೈಗೊಂಡಿರುವ ಕಾರಣ ಆಪಾದಿತ ಅಧಿಕಾರಿಗಳ ಮೇಲಿನ ಆರೋಪಗಳ ಕುರಿತು ಸದರಿಯವರು ಸಲ್ಲಿಸಿದ ಲಿಖಿತ ಹೇಳಿಕೆಗಳಲ್ಲಿನ ಅಂಶಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ, ಆಪಾದಿತ ಅಧಿಕಾರಿಯು ಕರ್ತವ್ಯ ಲೋಪವೆಸಗಿರುವುದು ಕಂಡುಬಂದ ಕಾರಣ ಮೇಲೆ ಓದಲಾದ (1)ರ ಆದೇಶದಲ್ಲಿ ದಂಡನೆಯನ್ನು ವಿಧಿಸಲಾಗಿದೆ. ಈ ಅಧಿಕಾರಿಯ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಈ ಹಿಂದೆ ಕೈಗೊಂಡಿರಲಿಲ್ಲ. ಹಾಗಾಗಿ ಪ್ರಸ್ತುತ ಸದರಿಯವರು ಸಲ್ಲಿಸಿರುವ ಲಿಖಿತ ಮನವಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರು ಸಲ್ಲಿಸಿರುವ ವರದಿಯಲ್ಲಿನ ಅಂಶಗಳನ್ನು ಪರಿಗಣಿಸಿ ಪ್ರಕರಣವನ್ನು ಪುನರ್ ಪರಿಶೀಲಿಸಲಾಗಿದೆ.

ಆಪಾದಿತ ಅಧಿಕಾರಿಯು ಚಳ್ಳಕೆರೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಲ್ಲಿ ದಿನಾಂಕ : 9.9.2008 ರಿಂದ 15.12.2012 ರವರೆಗೆ 3 ತಿಂಗಳು 6 ದಿನಗಳು ಕೆಲಸನಿರ್ವಹಿಸಿರುತ್ತಾರೆ. ಸದರಿಯವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಪೂರ್ವದಲ್ಲಿ ದಿನಾಂಕ:8.5.2008 ರಲ್ಲಿ ಅಳತೆ ಪುಸ್ತಕದಲ್ಲಿ ಕಾಮಗಾರಿಗಳು ಅನುಷ್ಠಾನಗೊಂಡಿರುವ ಬಗ್ಗೆ ವಿವರಗಳನ್ನು ದಾಖಲಿಸಿರುವುದರಿಂದ ಸದರಿ ಲೋಪಕ್ಕೆ ಅವರು ಜವಾಬ್ದಾರರಾಗಿರುವುದಿಲ್ಲ. ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ವಿವರಗಳನ್ನು ಎಂ.ಐ.ಎಸ್.ನಲ್ಲಿ ಗಣಕೀಕರಣಗೊಳಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ, ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಕಾಮಗಾರಿಗಳ ವಿವರಗಳನ್ನು ಎಂ.ಐ.ಎಸ್.ನಲ್ಲಿ ಗಣಕೀಕರಣಗೊಳಿಸಲು ದಿನಾಂಕ:1.4.2009 ರಿಂದ ಅನುಮೋದನೆ ನೀಡಲಾಗಿದ್ದು, ಈ ಅಂಶವನ್ನು

ಪರಿಗಣಿಸಿದಲ್ಲಿ ಸದರಿ ಅಧಿಕಾರಿಯು ಕಾರ್ಯನಿರ್ವಹಿಸಿದ ಅವಧಿ ಅಂದರೆ ದಿನಾಂಕ : 9.9.2008 ರಿಂದ 15.12.2012 ರ ಅವಧಿಯಲ್ಲಿ ಎಂ.ಐ.ಎಸ್.ನಲ್ಲಿ ಗಣಕೀಕರಣಗೊಳಸಲು ಮುಂದಾಗಿ ಹಣ ದುರುಪಯೋಗಕ್ಕೆ ಕಾರಣರಾಗಿರುವರು ಎಂಬ ಆರೋಪವು ಸಮರ್ಥನೀಯವಾಗಿರುವುದಿಲ್ಲ.

ಮುಂದುವರೆದು, ಸದರಿ ಅಧಿಕಾರಿಯು ಕಾಮಗಾರಿಯನ್ನು ಅನುಷ್ಠಾನ ಗೊಳಸುವ ಮೊದಲೇ ಅಕುಶಲ ಕಾರ್ಮಿಕರಿಗೆ ಹಣ ಪಾವತಿಸಿ ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ, ಕಾರ್ಯನಿರ್ವಾಹಕ ಅಧಿಕಾರಿ ಇವರು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಸಿರುವ ಬಗ್ಗೆ ಪರಿಶೀಲಿಸಿ, ಖಚಿತಪಡಿಸಿಕೊಳ್ಳುವುದು ಅವರ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಕಾಮಗಾರಿಯು ಅನುಷ್ಠಾನಗೊಂಡಿರುವ ಕಾರಣಕ್ಕಾಗಿ ಅಕುಶಲ ಕೂಲಿ ಕಾರ್ಮಿಕರಿಗೆ ವೇತನವನ್ನು ಪಾವತಿಸಿರುವ ವಿವರಗಳನ್ನು ಸಂಧರ್ಭನುಸಾರವಾಗಿ ಸಲ್ಲಿಸಿದ್ದರೂ ಸಹ ಈ ಕುರಿತಂತೆ ಯಾವುದೇ ದಾಖಲೆಗಳು ಲಭ್ಯವಿಲ್ಲವೆಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಳ್ಳಕೆರೆ ಇವರು ಸ್ಪಷ್ಟಪಡಿಸಿರುವ ಹಿನ್ನೆಲೆಯಲ್ಲಿ ಈ ಆರೋಪಕ್ಕೆ ಸಿಮೀತವಾಗಿ ಶ್ರೀ ಎಂ.ಸೋಮಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಳ್ಳಕೆರೆ ಇವರು ಲೋಪ ಎಸಗಿರುವುದು ಸ್ಪಷ್ಟವಾಗಿರುತ್ತದೆ.

ಈ ಹಿಂದೆ ಸದರಿ ಅಧಿಕಾರಿಗೆ ದಂಡನೆಯನ್ನು ವಿಧಿಸುವ ಸಂದರ್ಭದಲ್ಲಿ ವಿವರವಾಗಿ ಇಲಾಖಾ ವಿಚಾರಣೆಯನ್ನು ನಡೆಸದೇ, ಸದರಿ ಅಧಿಕಾರಿಯ ವಿರುದ್ಧದ ಆರೋಪಗಳು ಹಾಗೂ ಆ ಸಂದರ್ಭದಲ್ಲಿ ಆಪಾದಿತ ಅಧಿಕಾರಿಯು ಸಲ್ಲಿಸಿದ್ದ ಲಿಖಿತ ಹೇಳಿಕೆ ಮತ್ತು ಪೂರಕ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳ ಅನುಸಾರ ಸದರಿ ಅಧಿಕಾರಿಯ ವೇತನದಲ್ಲಿ 2 ಹಂತಗಳನ್ನು 2 ವರ್ಷಗಳ ಅವಧಿಗೆ ಸಂಚಿತ ಪರಿಣಾಮವಿಲ್ಲದಂತೆ (without cumulative effect) ಕೆಳಗಿಳಸುವ ಮತ್ತು ಸದರಿ ಅವಧಿಯಲ್ಲಿ ಅವರು ವೇತನ ಬಡ್ತಿಗಳಗೆ ಅರ್ಹರಿಲ್ಲವೆಂಬ ದಂಡನೆಯನ್ನು ವಿಧಿಸಿ ಆದೇಶಿಸಲಾಗಿದೆ. ಆದ್ದರಿಂದ, ಪ್ರಕರಣದ ಎಲ್ಲಾ ವಿವರಗಳನ್ನು ಪರಿಗಣಿಸಿ ಶ್ರೀ ಎಂ.ಸೋಮಣ್ಣ ಇವರಿಗೆ ದಿನಾಂಕ : 11.03.2014 ರ ಆದೇಶದಲ್ಲಿ ವಿಧಿಸಿರುವ ದಂಡನೆಯನ್ನು ಮಾರ್ಪಡಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 212 ವಿಸೇಬಿ 2015. ಬೆಂಗಳೂರು ದಿನಾಂಕ: 28-01-2016</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ಸೋಮಣ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಳ್ಳಕೆರೆ ಚಿತ್ರದುರ್ಗ ಜಿಲ್ಲೆ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ ಕೊರಟಗೆರೆ) ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-8(iv) ರನ್ವಯ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 48 ವಿಸೇಬಿ 2010 ದಿನಾಂಕ: 11.03.2014 ರಲ್ಲಿ **ಎರಡು ಹಂತಗಳು ಎರಡು ವರ್ಷಗಳ ಅವಧಿಗೆ ಸಂಚಿತ ಪರಿಣಾಮವಿಲ್ಲದಂತೆ** ಕೆಳಗಿಳಸುವ ದಂಡನೆಯನ್ನು ವಿಧಿಸಿ ಆದೇಶಿಸಿರುವುದನ್ನು ದಿನಾಂಕ: 11.03.2014 ರಿಂದಲೇ ಅನ್ವಯವಾಗುವಂತೆ ಮಾರ್ಪಡಿಸಿ.

---4

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು-1957ರ ನಿಯಮ-8(iii) ರನ್ವಯ **"ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದಂತೆ** ತಡೆಹಿಡಿಯುವ ದಂಡನೆಯನ್ನು ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

T. Manju 28.1.16
(ಟಿ ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ.
3. ಸಂಬಂಧಿಸಿದ ಅಧಿಕಾರಿಗೆ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶೀ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ & ಸಿ)
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ(ಆಡಳಿತ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3. ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.